# ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ

## 2017–18ನೇ ಸಾಲಿನ ಕ್ರಿಯಾಯೋಜನೆ (ಪರಿಷ್ಕೃತ) ದಿನಾಂಕ : 11–09–2017

| ಕ್ರಸ | ಕಾರ್ಯಕ್ರಮದ ಹೆಸರು | ಸ್ಥಳ ಸಮಯ | ಸ್ವಂತ /ಸಹಯೋಗ | ಭೌತಿಕ ಗುರಿ | ಅರ್ಥಿಕ ಗುರಿ | ವಿವರ |
|---|---|---|---|---|---|---|
| 1 | ಕಛೇರಿ ಹಾಗೂ ಮಾಹಿತಿಕೇಂದ್ರದ ಸೌಲಭ್ಯವೃದ್ಧೀಕರಣ | ಜೂನ್ ಮತ್ತು ಜುಲೈ 2017 (ಮಂಗಳೂರು ಪ್ರದಾನ ಕಛೇರಿ) | ಸ್ವಂತ | 7 | 3,50,000.00 | ಅಕಾಡೆಮಿ ಕಛೇರಿಯಲ್ಲಿ ಸ್ವತ್ತುಗಳ ರಕ್ಷಣೆಯ ಹಿತದೃಷ್ಟಿಯಿಂದ ಹಾಗೂ ಈಗಾಗಲೇ ಕಂಡುಬಂದಿರುವ ಸಮಸ್ಯೆಗಳಿಂದ ಪರಿಹಾರ ಕಾಣಲು ಅಕಾಡೆಮಿಯ ಕಛೇರಿಯಲ್ಲಿ ಕೆಲವು ಹೆಚ್ಚಿನ ಪೀಠೋಪಕರಣ, ಸುರಕ್ಷತೆಗಾಗಿ ಕ್ಯಾಮರ ಅಳವಡಿಕೆಯು, ತುಂಬಾ ಅಗತ್ಯವಾಗಿರುತ್ತದೆ. ಇತ್ತೀಚೆಗೆ ಕಛೇರಿಯಲ್ಲಿನ ಸ್ವತ್ತಿಗೆ ಸಂಬಂಧಿಸಿ ಪೊಲೀಸ್ ಇಲಾಖೆಯಿಂದ ಹೆಚ್ಚುವರಿ ಭದ್ರತಾ ಕ್ರಮ ಸೂಚನೆ ಬಂದಿರುವ ಮೇರೆಗೆ ಈ ಸೌಲಭ್ಯಗಳನ್ನು ಆಳವಡಿಸಿ ಕೊಳ್ಳಬೇಕಾಗಿದೆ.<br>• ಸಿ.ಸಿ. ಕ್ಯಾಮರ ಖರೀದಿಸಿ ಆಳವಡಿಸುವುದು<br>• ಟಿ.ವಿ. ಸೆಟ್ಟ್ ಖರೀದಿಸುವುದು<br>• ದೊಡ್ಡ ಸ್ಕ್ರೀನಿನ ಡೆಸ್ಕ್ ಟಾಪ್ ಕಂಪ್ಯುಟರ್ ಖರೀದಿ<br>• ಸೇಪ್ ಭದ್ರತಾ ಕಪಾಟು –1 ಕಡತಗಳ ರ್‍ಯಾಕ್–1 ಖರೀದಿ<br>• ಕಛೇರಿಯ ಲೆಕ್ಕಚಾರಗಳನ್ನು ಟ್ಯಾಲಿ ಅಥವಾ ಇತರ ಸಾಪ್ಟವೇರ್ ಮೂಲಕ ದಾಖಲಿಸಲು ಹೊರಗುತ್ತಿಗೆ ನೀಡುವುದು. |
| | 1 ಸಿ.ಸಿ.ಕ್ಯಾಮೆರಾ ಅಳವಡಿಸುವುದು | | | 35,000.00 | | |
| | 2 ಭದ್ರತಾ ಕಪಾಟು(2)ಹಾಗೂ ಕಡತಗಳರ್‍ಯಾಕ್ | | | 55,000.00 | | |
| | 3 ಟಿ.ವಿ.ಸೆಟ್ | | | 25,000.00 | | |
| | 4 ಸಭಾಭವನ ಮೇಜು ಕುರ್ಚಿಗಳು | | | 1,00,000.00 | | |
| | 5 ಡೆಸ್ಕ್ ಟಾಪ್ ಕಂಪ್ಯುಟರ್ ಸೆಟ್–1 | | | 35,000.00 | | |
| | 6 ಕ್ಯಾಬಿನ್ ಹಾಗೂ ಕ್ಯುಬಿಕಲ್ಸ್ | | | 50,000.00 | | |
| | 7 ಕಛೇರಿ ಲೆಕ್ಕಗಳಿಗೆ ಸಾಪ್ಟವೇರ್ ಅಳವಡಿಕೆ | | | 50,000.00 | | |
| 2. | ವಾರ್ಷಿಕ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಹುಮಾನ ವಿತರಣ ಸಮಾರಂಭ ಹಾಗೂ ಸಾಂಸ್ಕೃತಿಕ ಉತ್ಸವ | ಜನವರಿ–2018 ಉ.ಕ ಜಿಲ್ಲಾ ಪ್ರಮುಖ ಪಟ್ಟಣದಲ್ಲಿ | ಸ್ವಂತ | 1 | 7,00,000.00 | **ಸಮಾರಂಭವನ್ನು ಕಾರವಾರದಲ್ಲಿ ಡಿಸೆಂಬರ್,20 2017 – ಜನವರಿ, 7 2018–ರೊಳಗೆ ನಡೆಸುವುದು**<br>**ಗೌರವ ಪ್ರಶಸ್ತಿ:**2015ನೇ ಸಾಲಿನ ಅಕಾಡೆಮಿಯು ನೀಡುವ ಗೌರವ ಪ್ರಶಸ್ತಿಯಲ್ಲಿ ಮೂರು ಪ್ರಕಾರಗಳ 1. ಕೊಂಕಣಿ ಭಾಷೆ – ಸಾಹಿತ್ಯ, 2. ಕೊಂಕಣಿ ಕಲೆ–ನಾಟಕ/ ಸಂಗೀತ 3. ಕೊಂಕಣಿ ಜನಪದ ಕ್ಷೇತ್ರಗಳಲ್ಲಿ ಅನನ್ಯ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಪ್ರಶಸ್ತಿಯಲ್ಲಿ ನಗದು ಗೌರವಧನ ರೂ. 50,000/, ಹಾಗೂ ಶಾಲು, ಗಂಧದಹಾರ, ಸ್ಮರಣಿಕೆ, ಪ್ರಮಾಣ ಪತ್ರ ಮತ್ತು ಫಲ ತಾಂಬೂಲ ನೀಡಿ ಗೌರವಿಸಲಾಗುವುದು. ಈ ಸಂದರ್ಭದಲ್ಲಿ ಅಯ್ದ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವುದು.<br>**ಪುಸ್ತಕ ಪುರಸ್ಕಾರ:** 2015ನೇ ಅಕಾಡೆಮಿಯ ಪುಸ್ತಕ ಪುರಸ್ಕಾರಕ್ಕೆ 1.ಕನ್ನಡ–ಕೊಂಕಣಿ ಯಾ ಕೊಂಕಣಿ–ಕನ್ನಡ ಭಾಷಾಂತರ, 2. ಕವನ, 3. ಕಥೆ/ಕಾದಂಬರಿ/ಅಧ್ಯಯನ ಗ್ರಂಥ/ಲೇಖನ ಈ ಮೂರು ಪ್ರಕಾರಗಳನ್ನು ಬಹುಮಾನಕ್ಕೆ ಆಯ್ಕೆಮಾಡಲಾಗುವುದು. ಈ ಪುರಸ್ಕಾರವು ನಗದು ಗೌರವಧನ ರೂ. 25,000/– ಹಾಗೂ ಶಾಲು, ಗಂಧದಹಾರ, ಸ್ಮರಣಿಕೆ, ಪ್ರಮಾಣ ಪತ್ರ ವನ್ನು ಒಳಗೊಂಡಿರುತ್ತದೆ. |
| 3 | ಕೊಂಕಣಿ ರಾಷ್ಟ್ರೀಯ ಮಾನ್ಯಾತಾ ಬೆಳ್ಳಿ ಹಬ್ಬ ಆಚರಣೆ | 20–8–2017<br>5 | ಸಹಯೋಗ–ಜಿಲ್ಲಾ ಮಟ್ಟದ ಸಂಘಸಂಸ್ಥೆಗಳು | 5 | 10,00,000.00 | ಕರ್ನಾಟಕದ ಪ್ರಮುಖ ಪಟ್ಟಣಗಳ್ಳಲ್ಲಿ ವಿಚಾರಗೋಷ್ಠಿ, ಚರ್ಚೆ, ಪ್ರಬಂಧ ಮಂಡನೆ, ವಿಚಾರ ವಿನಿಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂತಾದ ವೈವಿದ್ಯ ಕಾರ್ಯಕ್ರಮದೊಂದಿಗೆ ನಡೆಸುವುದು. |

| | | | | | | |
|---|---|---|---|---|---|---|
| | | ಜಿಲ್ಲಾಕೇಂದ್ರಗಳಲ್ಲಿ | ದಕ್ಷಿಣ ಕನ್ನಡ ಜಿಲ್ಲೆ–1<br>ಉತ್ತರ ಕನ್ನಡ ಜಿಲ್ಲೆ–1<br>ಉಡುಪಿ ಜಿಲ್ಲೆ–1<br>ಬೆಂಗಳೂರು–1 | | | (1)ಕುಮಟಾ – 2 ಲಕ್ಷ (2)ಮಂಗಳೂರು– 1 ಲಕ್ಷ (3) ಉಡುಪಿ ಕುಂದಾಪುರ – 1 ಲಕ್ಷ (4) ಪುತ್ತೂರು ವಿಟ್ಲ –1 ಲಕ್ಷ (5)ಬೆಂಗಳೂರು – 1 ಲಕ್ಷ (6)ಮೈಸೂರು–1 (7)ಹುಬ್ಬಳ್ಳಿ ದಾರವಾಢ–1 ಲಕ್ಷ (8) ಹೊಸ್ಪೇಟೆ–ಬಳ್ಳಾರಿ–50 ಸಾವಿರ (9) ಬೆಳಗಾವಿ–50ಸಾವಿರ(10)ಚಿಕ್ಕಮಗಳೂರು–1ಲಕ್ಷ ಈ ಮಿತಿಗಳಲ್ಲಿ ಕಾರ್ಯಕ್ರಮ ನಡೆಸುವುದು. |
| 4. | ಮೊಬೈಲ್ ಕೊಂಕಣಿ ಬಜಾರ ವಾಹನ ನಿರ್ವಹಣೆ | 2017–18 | ಸ್ವಂತ | 1 | 2,00,000.00 | ವಾಹನ ಚಾಲಕರ ಸಂಭಾವನೆ, ವಾಹನ ಇಂಧನ, ವಾಹನದ ಕಿರು ದುರಸ್ತಿ ನಿರ್ವಹಣ ವೆಚ್ಚ ಈ ಯೋಜನೆಯಡಿಯಲ್ಲಿ ಕೊಂಕಣಿ ಓದನ್ನು ಪ್ರೋತ್ಸಾಹಿಸಲು ಮೊಬೈಲ್ ಲೈಬ್ರರಿ ಹಾಗೂ ಪುಸ್ತಕ ಮಾರಾಟ ಕಾರ್ಯಕ್ರಮವನ್ನು ವರ್ಷವಿಡೀ ಅಯೋಜಿಸಲಾಗುವುದು.<br>ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ಕಡೆಗಳಲ್ಲಿ ಪುಸ್ತಕ ಹಾಗೂ ಕೊಂಕಣಿ ಸಂಸ್ಕೃತಿಯ ಇತರ ಯಾವುದೇ ಪರಿಕರಗಳ ಮಾರಾಟ ಮತ್ತು ನಿಗದಿತ ಸ್ಥಳಗಳಲ್ಲಿ ಪುಸ್ತಕಗಳನ್ನು ಓದುವ ಸೌಲಭ್ಯ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಕೊಂಕಣಿ ಕಾರ್ಯಕ್ರಮ ನಡೆದಾಗ ಪ್ರಚಾರ ನೀಡುವುದು. |
| 5. | ಶಾಲೆಗಳಲ್ಲಿ ಕೊಂಕಣಿ ಶಿಕ್ಷಣ ಅಭಿವೃದ್ಧಿ ಯೋಜನೆ<br>ಶಿಕ್ಷಕರಿಗೆ ಸಂಭಾವನೆ ಹಾಗೂ ತರಬೇತಿ | ಜೂನ್ 2017 ರಿಂದ ಮಾರ್ಚ್ 2018ರ ತನಕ | ಸ್ವಂತ | 16 | 8,00,000.00 | ಕೊಂಕಣಿ ಶಿಕ್ಷಣವು ಕಳೆದ 10 ವರ್ಷಗಳಿಂದ ಶಿಕ್ಷಕರ ಅಲಭ್ಯತೆಯಿಂದ ಸೊರಗುತ್ತಿದೆ. ಸರಕಾರದ ವತಿಯಿಂದ ಕೊಂಕಣಿ ಶಿಕ್ಷಕರ ನೇಮಕಾತಿ ನಡೆಯುತ್ತಿಲ್ಲಾ ಇದನ್ನು ಪರಿಶೀಲಿಸಿ ಈ ಕೆಳಗಿನಂತೆ ಯೋಜನೆ ಹಾಕಲಾಗಿದೆ<br>• ಕೊಂಕಣಿಯನ್ನು ತೃತೀಯ ಭಾಷೆಯಾಗಿ ಕಲಿಸಬೇಕು. ಹೆಚ್ಚುವರಿ ಭಾಷೆಯಾಗಿ ಕಲಿಸುವವರಿಗೆ ಈ ಸೌಲಭ್ಯ ಇರುವುದಿಲ್ಲ.<br>• ಐದು ತರಗತಿಗಳಿಗೆ (6 ,7 , 8, 9. 10) ಬೋಧಿಸುವ ಶಿಕ್ಷಕರಿಗೆ ಪ್ರತಿ ತರಗತಿಯಲ್ಲಿ ಕನಿಷ್ಠ 5 ವಿದ್ಯಾರ್ಥಿಗಳಂತೆ ಒಟ್ಟು 25ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇದ್ದರೆ ತಿಂಗಳೊಂದಕ್ಕೆ ಗರಿಷ್ಠ ಮಾಸಿಕ ರೂ.7,000/– ಸಂಭಾವನೆ ನೀಡಲಾಗುವುದು<br>• 3 ತರಗತಿಗಳಿಗೆ(8,9.10) ಬೋಧಿಸುವ ಶಿಕ್ಷಕರಿಗೆ ಪ್ರತಿ ತರಗತಿಯಲ್ಲಿ ಕನಿಷ್ಠ 5 ವಿದ್ಯಾರ್ಥಿಗಳಂತೆ ಒಟ್ಟು 15 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇದ್ದರೆ ಗರಿಷ್ಠ ಮಾಸಿಕ ರೂ. 5000/–ಸಂಭಾವನೆ ನೀಡಲಾಗುವುದು.<br>• 2 ತರಗತಿಗಳಿಗೆ(6,7) ಬೋಧಿಸುವ ಶಿಕ್ಷಕರಿಗೆ ಪ್ರತಿ ತರಗತಿಯಲ್ಲಿ ಕನಿಷ್ಠ 5 ವಿದ್ಯಾರ್ಥಿಗಳಂತೆ ಒಟ್ಟು 15 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇದ್ದರೆ ಗರಿಷ್ಠ ಮಾಸಿಕ ರೂ. 4000/–ಸಂಭಾವನೆ ನೀಡಲಾಗುವುದು.<br>• ಈ ಮೇಲಿನ ಸಂದರ್ಭ ಹೊರತು ಪಡಿಸಿ ಇತರ ಸಂದರ್ಭಗಳಲ್ಲಿ ಗರಿಷ್ಠ ಮಾಸಿಕ ರೂ.3000/– ಸಂಭಾವನೆ ನೀಡಲಾಗುವುದು.<br>ಈ ಮೊತ್ತ ವೆಚ್ಚವಾಗದೇ ಉಳಿದರೆ ಅದನ್ನು ಕೊರತೆಯಾಗುವ ಇತರ ಕಾರ್ಯಕ್ರಮಗಳಿಗೆ ಬಳಸಬಹುದು. |

| | | | | | | |
|---|---|---|---|---|---|---|
| 6. | ಕಿರು ಸಂಶೋಧನಾ ಅಧ್ಯಯನಗಳು ಹಾಗೂ ದೃಶ್ಯ ಧ್ವನಿ–ಪಠ್ಯರೂಪದ ಸಾಕ್ಷ್ಯಚಿತ್ರಗಳು | ಜೂನ್–17 ರಿಂದ ನವಂಬರ್–17 | ಸಹಯೋಗ<br>ಕೊಂಕಣಿ ಸ್ನಾತಕೋತ್ತರ ವಿಭಾಗ,<br>ಮಂಗಳೂರು ವಿಶ್ವವಿದ್ಯಾನಿಲಯ | 5 | 1,00,000.00 | ಕೊಂಕಣಿ ಭಾಷೆ, ಭಾಷಾವಿಜ್ಞಾನ, ಸಾಹಿತ್ಯ, ಕಲೆ, ಜನಪದ ಕ್ಷೇತ್ರದಲ್ಲಿ ಕ್ಷೇತ್ರಾಧಾರಿತ ಅಧ್ಯಯನ–ಕೊಂಕಣಿ ತಜ್ಞ ಪ್ರೋಫೆಸರ್‌ಗಳ ಮಾರ್ಗದರ್ಶನದಲ್ಲಿ ಸಂಶೋಧನಾ ವರದಿಯನ್ನು ಪ್ರಕಟಿಸುವುದು ಕಡ್ಡಾಯ. ಗರಿಷ್ಠ ಅವಧಿ 6 ತಿಂಗಳು ಒಂದು ಅಧ್ಯಯನಕ್ಕೆ ಗರಿಷ್ಠ ಅನುದಾನ ರೂ.20,000/–<br>ಮಂಗಳೂರು ವಿಶ್ವವಿದ್ಯಾಲಯದಲ್ಲಿ ನೂತನವಾಗಿ ಪ್ರಾರಂಭಗೊಂಡ ಕೊಂಕಣಿ ಎಂ.ಎ. ಅಧ್ಯಯನ ಮಾಡುವ ವಿದ್ಯಾರ್ಥಿಗಳು ಕೈಗೊಳ್ಳಬೇಕಾದ ಅಧ್ಯಯನಕ್ಕಾಗಿ ಆರ್ಥಿಕವಾಗಿ ಪ್ರೊತ್ಸಾಹ ನೀಡುವುದು. |
| 7 | ಜಾನಪದ ಕಲೆಗಳ ಅಭ್ಯಾಸ, ತರಬೇತಿ ಹಾಗೂ ಪ್ರದರ್ಶನ ಕಾರ್ಯಾಗಾರಗಳು | ನವಂಬರ್–2017 | ಸ್ವಂತ<br>ಇತರ ರಾಜ್ಯಗಳ ಕೊಂಕಣಿ ಅಕಾಡೆಮಿ ಸಹಯೋಗ ಪಡೆಯುವುದು. | 5 | 7,00,000.00 | ಉತ್ತರ ಕನ್ನಡ ಜಿಲ್ಲೆಯ ತಾಲುಕು ಕೇಂದ್ರಗಳಲ್ಲಿ ಕೊಂಕಣಿಯ ವೈವಿಧ್ಯ ಜನಪದ ನೃತ್ಯ, ಹಾಡು, ಸಾಂಪ್ರಾದಾಯಿಕ ಉಡಿಗೆ ತೊಡಿಗೆ ಆಡಿಗೆ ವಿಧಾನ, ಕ್ಷೇತ್ರದಲ್ಲಿ ಕಾರ್ಯಕ್ರಮ ಅಯೋಜಿಲಾಗುವುದು<br>1. ಜೊಯಿಡಾ–ದಾಂಡೇಲಿ–ಪೂರ್ವಾಹ್ನ ಜೊಯಿಡಾದಲ್ಲಿ ಕುಡುಬಿ ಬುಡಕಟ್ಟು ಜನಪದ ನೃತ್ಯ ಪ್ರಾತ್ಯೇಕ್ಷಿಕೆ ಅದೇ ದಿನ ಅಪರಾಹ್ನ ದಾಂಡೇಲಿಯಲ್ಲಿ ಸಾಂಪ್ರಾದಾಯಿಕ ಅಡಿಗೆ,ಖಾದ್ಯಗಳ ಪ್ರಾತೇಕ್ಷಿಕೆ–ಪಾರಂಪರಿಕ ಮಹಿಳಾ ಉಡುಗೆ ತೊಡಿಗೆಗಳ ಪ್ರಾತ್ಯೇಕ್ಷಿಕೆ ಪ್ರದರ್ಶನ, ಗುಮ್ಟಾಂ ಫಾಗ್ ಜನಪದ ನೃತ್ಯ ಪ್ರದರ್ಶನ, ಮಾನ್ಯತ ದಿನಾಚರಣೆಯ ವಿಶೇಷ ವಿಚಾರಗೋಷ್ಠಿ–ನಾಟಕ ಪ್ರದರ್ಶನ – 2.5 ಲಕ್ಷ<br>2. ಯಲ್ಲಾಪುರ – ಮುಂಡಗೋಡಾ ಪ್ರದೇಶದ ಸಿದ್ದಿ ಜನಪದ ಕಮ್ಮಟ ಪ್ರದರ್ಶನ, ಹಾಗೂ ಮಾನ್ಯತಾ ದಿನ ಬೆಳ್ಳಿ ಹಬ್ಬ ಆಚರಣೆ – 50 ಸಾವಿರ<br>3. ಶಿರಸಿ – ಸಿದ್ದಾಪುರ ಚಾಮಗಾರ ಹಾಗೂ ಇತರ ಸಮುದಾಯದ ಜನಪದ ಹಾಡು ನೃತ್ಯ ಪ್ರಾತ್ಯೇಕ್ಷಿಕೆ ಪ್ರದರ್ಶನ ಹಾಗೂ ಮಾನ್ಯತಾ ದಿನ ಬೆಳ್ಳಿ ಹಬ್ಬ ಆಚರಣೆ– 50 ಸಾವಿರ<br>4. ಹೊನ್ನಾವರ–ಗೇರುಸೊಪ್ಪ ಪ್ರದೇಶದ ಕೊಂಕಣಿ ಜನರ ವೈವಿಧ್ಯ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಮಾನ್ಯತಾ ದಿನ ಬೆಳ್ಳಿ ಹಬ್ಬದ ಆಚರಣೆ. –1 ಲಕ್ಷ<br>5. ಅಂಕೋಲಾ ಕೊಂಕಣಿ ಮಾನ್ಯತಾ ದಿನಾ ಬೆಳ್ಳಿ ಹಬ್ಬ ಆಚರಣೆ ಹಾಗೂ ದಿನಕರ ದೇಸಾಯಿ ಸಂಸ್ಮರಣೆ ವಿಚಾರ ಸಂಕಿರಣ–50 ಸಾವಿರ<br>6. ಭಟ್ಕಳದಲ್ಲಿ ಮೀನುಗಾರಿಕ ಕುಲಕಸಬಿನ ಖಾರ್ವಿ ದಾಲ್ದಿ, ಗಾಬಿತ್, ಮೆಸ್ತ/ಚಾರೊಡಿ, ಸಮುದಾಯದವರಿಗಾಗಿ ವಿಚಾರಗೋಷ್ಠಿ ಮತ್ತು ಶಬ್ದ ದೃಶ್ಯ ದಾಖಲಿಕರಣ– 2 ಲಕ್ಷ |

| | | | | | | |
|---|---|---|---|---|---|---|
| 8. | ಪುಸ್ತಕ ಪ್ರಕಟಣೆಗಳು ಹಾಗೂ ಖರೀದಿಗಳು | ಏಪ್ರಿಲ್ 2017 ರಿಂದ ಜನವರಿ 2018ರ ವರೆಗೆ | ಸ್ವಂತ | ಕನಿಷ್ಠ 5 ಪುಸ್ತಕ ಪ್ರಕಟಣೆ ಹಾಗೂ 4 ತ್ರೈಮಾಸಿಕ ವಾರ್ತಾಪತ್ರ | 4,00,000.00 | *ಅಕಾಡೆಮಿಯ ತ್ರೈಮಾಸಿಕ ವಾರಪತ್ರಿಕೆ ಕೊಂಕಣಿ ಸಿರಿಸಂಪದ ಪ್ರಕಟಣೆ<br>*ಪ್ರಮುಖ ಪತ್ರಿಕೆಗಳಲ್ಲಿ ಹಸ್ತಪ್ರತಿ ಆಹ್ವಾನಿಸಿ, ಪರಿಶೀಲಿಸಿ, ಸಭೆಯ ಮುಂದೆ ಮಂಡಿಸಿ, ಸಭೆಯ ಅಭಿಪ್ರಾಯದಂತೆ (ಪ್ರಕಟಿಸುವುದು ಅಥವಾ ಧನಸಹಾಯ ನೀಡುವುದು) ಕ್ರಮಕೈಗೊಳ್ಳುವುದು.<br>*ಕೊಂಕಣಿ ಮಾನ್ಯತಾ ದಿನಾಚರಣೆಯ ಬೆಳ್ಳಿ ಹಬ್ಬದ ಪ್ರಯುಕ್ತ ವಿಶೇಷ ಸಂಚಿಕೆಯನ್ನು ಪ್ರಕಟಿಸುವುದು |
| 9. | ರಾಷ್ಟ್ರೀಯ ಕೊಂಕಣಿ ಸಮ್ಮೇಳನ | ಡಿಸೆಂಬರ್–2017 | ಸಹಯೋಗ<br>(i) ಮಂಗಳೂರು ವಿಶ್ವವಿದ್ಯಾಲಯ (ಕನ್ನಡ ಇಂಗ್ಲೀಷ್ ಹಿಂದಿ ವಿಭಾಗಗಳು ಹಾಗೂ –ಕೊಂಕಣಿ ಅಧ್ಯಯನ ಪೀಠ)<br>(ii) ಗೋವಾ ವಿಶ್ವ ವಿದ್ಯಾನಿಲಯ<br>(iii)ಗೋವಾ ಕೊಂಕಣಿ ಅಕಾಡೆಮಿ<br>(IV)ಕೇರಳ ಕೊಂಕಣಿ ಅಕಾಡೆಮಿ | 1 | 5,00,000.00 | ಬಹುಭಾಷೀಯ(ಕೊಂಕಣಿ,ಹಿಂದಿ, ಇಂಗ್ಲೀಷ್,ಕನ್ನಡ) ರಾಷ್ಟ್ರಮಟ್ಟದ ವಿಚಾರಗೋಷ್ಠಿ ಹಾಗೂ ಸಮ್ಮೇಳನ 40 ಸಂಶೋಧನಾ ಪತ್ರಿಕೆಗಳ ಮಂಡನೆ ಹಾಗೂ 2 ತಜ್ಞರ ತಂಡ ಗೋಷ್ಠಿ<br>(ಒಟ್ಟು ಅಂದಾಜು ವೆಚ್ಚ ರೂ.20 ಲಕ್ಷದಲ್ಲಿ ಅಕಾಡೆಮಿ ಪಾಲು 5 ಲಕ್ಷ)<br>ಈ ಬಗ್ಗೆ ಬರುವ ಡಿಸೆಂಬರ್ ಅಥವ ಜನವರಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಅವರಣದಲ್ಲಿ ಸಮ್ಮೇಳನವನ್ನು ಅಯೋಜಿಸುವುದು. |
| 10. | ಅಧ್ಯಕ್ಷರ ಸಂಭಾವನೆ, ವಾಹನ ಭತ್ಯೆ, ದೂರವಾಣಿ ಸದಸ್ಯರ ಸಭಾ ಪ್ರಯಾಣ ಮತ್ತು ಸಭಾ ಭತ್ಯೆ | 2017–18 | ಸ್ವಂತ | 1 | 5,00,000.00 | ಅಕಾಡೆಮಿ ಅಧ್ಯಕ್ಷರ ಮಾಸಿಕ ಸಂಭಾವನೆ, ಪ್ರವಾಸಭತ್ಯೆ, ದೂರವಾಣಿ ಶುಲ್ಕ ಹಾಗೂ ಮಾಸಿಕ ಸಭೆ ಮತ್ತು ಪ್ರಾಧಿಕಾರದ ಸಭೆಗಳಲ್ಲಿ ಭಾಗವಹಿಸುವ ಸದಸ್ಯರುಗಳ ಪ್ರಯಾಣ ಮತ್ತು ಸಭಾಭತ್ಯೆಗಳ ವಾಸ್ತವ್ಯ ಭತ್ಯೆಯನ್ನು ಹಾಲಿ ನಿಯಾಮವಾಳಿಯಾಧರದಲ್ಲಿ ನೀಡಲಾಗುವುದು. |
| 11 | ಕಾರ್ಯಕ್ರಮ ಅನುಷ್ಠಾನ ವೆಚ್ಚಗಳು | 2017–18 | ಸ್ವಂತ | – | 7,50,000.00 | ಕಾರ್ಯಕ್ರಮಗಳನ್ನು ಅಯೋಜಿಸುವ ಸಂದರ್ಭದಲ್ಲಿ ಬರುವ ಪೂರ್ವಭಾವಿ ಸಭೆಗಳು, ಅಕಾಡೆಮಿ ಸಭೆಗಳು, ಸ್ಟೇಷನರಿ ವೆಚ್ಚಗಳು, ಸಭೆ ಸಮಾರಂಭಗಳಿಗೆ ಹಾಜರಾಗಲು ಪ್ರಯಾಣ ವೆಚ್ಚಗಳು<br>ಅಕಾಡೆಮಿ ಕಛೇರಿಯ ದೈನಂದಿನ ಅಗತ್ಯತೆಗಳನ್ನು ತಿಂಗಳಿಗೊಮ್ಮೆ ಪಾವತಿಸುವ ವ್ಯವಸ್ಥೆಯಲ್ಲಿ ಈ ಕೆಳಗಿನ ಸಂಸ್ಥೆಗಳನ್ನು ಆಯ್ಕೆ ಮಾಡಿದೆ. |
| | 2017–18ನೇ ಸಾಲಿನ ಕ್ರಿಯಾಯೋಜನೆಯ ಒಟ್ಟು ಮೊತ್ತ | | | | 60,00,000.00 | |
| | 2016–17ನೇ ಸಾಲಿನಲ್ಲಿ ಕೊರತೆಯಾಗಿರುವ ಮೊತ್ತದ ಬಗ್ಗೆ ಕೇಳಿರುವ ಹೆಚ್ಚುವರಿ ಅನುದಾನ | | | | 10,00,000.00 | ಈ ಅನುದಾನದಿಂದ 2016–17ರಲ್ಲಿ ಪಾವತಿಗೆ ಬಾಕಿಯಾಗಿರುವ ಎಲ್ಲಾ ಮೊತ್ತವನ್ನು ನೀಡಿ ಬಾಕಿ ಚುಕ್ತಗೊಳಿಸಬೇಕು. |
| | ಒಟ್ಟು ಬೇಡಿಕೆ | | | | 70,00,000.00 | |